ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಬಜೆಟ್ ಪುಸ್ತಕದಲ್ಲಿ ಬಂದಿರಬಹುದು. ಆದರೆ ಆದು not feasible ಎಂದು ಕೈಬಿಡಲಾಗಿದೆ.

ಶ್ರೀ ಎಂ. ವೈ. ಪಾಟೀಲ್—ಫೀಸಿಬಲ್ ಇದೆ ಎಂದು ಎರಡು ವರ್ಷದಿಂದ ಬಜೆಟ್ ಪುಸ್ತಕದಲ್ಲಿ ಬಂದಿದೆ. ಇವತ್ತು ಫೀಸಿಬಲ್ ಇಲ್ಲ ಎಂದು ಹೇಳುತ್ತಿದ್ದೀರಿ. ಈಗಾಗಲೇ ಈ ಯೋಜನೆ ಮುಂಜೂರಾಗಿ ಬಜೆಟ್ ಪುಸ್ತಕದಲ್ಲಿ ಬರುತ್ತಿದೆ, ಆದರೆ ಕೆಲಸ ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಕೇಳಿದರೆ ಈಗ ಫೀಸಿಬಲ್ ಇಲ್ಲ ಎಂದು ಹೇಳುತ್ತೀರಿ. ಆದರೆ ಬರವಣಿಗೆಯ ಉತ್ತರದಲ್ಲಿ ಅದಿನ್ನೂ ತನಿಖೆಯಲ್ಲಿದೆ ಎಂದು ಹೇಳಿದ್ದೀರಿ. ಒಂದಕ್ಕೊಂದು ತಾರತಮ್ಯ ಇದೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇನ್‌ವೆಸ್ಟಿಗೇಷನ್ ಮಾಡಿದನಂತರವೇ ಫೀಸಿಬಲ್ ಇಲ್ಲ ಎಂದು ಉತ್ತರ ಕೊಟ್ಟಿರುವುದು.

ಅಧ್ಯಕ್ಷರು.—ನೀವಿಬ್ಬರೂ ಆಮೇಲೆ ಕುಳಿತುಕೊಂಡು ಬೇಕಾದರೆ ಮಾತನಾಡಿ.

Construction of bridge across Nandini River, Karkala Taluk

744 SRI. DAMODAR MULKY, (Mudabidri)--Will the Minister for Public Works be pleased to state.

(a) whether it is not a fact that the construction of a bridge over Nandini river at Aswathapura, Karkala Taluk. D. K. District was sanctioned during 1979 to complete the missing link in the Aswathapura Ganjimata P. W. D. Road.

(b) whether it is a fact that the same was cancelled and if so, when it was cancelled and the reasons for the cancellation.

SRI KAGODU THIMMAPPA (Minister for Public Works.—

(a) This was included in the 2 crores programme of works approved in G. O. No. PWD 219 CRM 79 dated 3rd December 1979.

(b) The road was deleted subsequently due to paucity of funds.

ಶ್ರೀ ದಾಮೋದರ ಮುಲ್ಕಿ.—ಸ್ಪಾವಿ, ಹಣದ ಕೊರತೆಯಿಂದ ಸದರಿ ರಸ್ತೆಯನ್ನು ಕೈಬಿಡಲಾಗಿದೆಯೆಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ೨ ಕ್ರೋರ್ಸ್‌ಪ್ರೋಗ್ರಾಮ್‌ನಲ್ಲಿ ಎಷ್ಟು ಕೆಲಸವನ್ನು ಹಣದ ಅಭಾವದಿಂದ ಕೈಬಿಡಲಾಗಿದೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ (ಸಾರಿಗೆ ಸಚಿವರು) (ಲೊಕೋಪಯೋಗಿ ಖಾತೆ ಮಂತ್ರಿಗಳ ಪರವಾಗಿ).—ಆ ವಿವರ ನನ್ನ ಹತ್ತಿರ ಇಲ್ಲ ಈ ಕೆಲಸವನ್ನು ಮತ್ತೆ ಎಸ್ಟಿಮೇಟ್ ಮಾಡಲಾಗಿದೆ. ಸುಮಾರು ೪.೭೧ ಲಕ್ಷಕ್ಕೆ ಎಸ್ಟಿಮೇಟ್ ಆಗಿದ್ದು ಹಣದ ಪರಿಸ್ಥಿತಿ ಸುಧಾರಿಸಿದ ನೋಲೆ ತಕ್ಷಣ ಈ ಕೆಲಸವನ್ನು ತೆಗೆದುಕೊಳ್ಳಲಾಗುವುದು

ಶ್ರೀ ದಾಮೋದರ ಮುಲ್ಕಿ.—ಒಂದೊಂದು ಬ್ಲಾಕ್‌ಗೆ ಎರಡೆರಡು ಕೆಲಸಗಳನ್ನು ತೆಗೆದುಕೊಂಡಿದ್ದೀರಿ. ನನ್ನ ದಕ್ಷಿಣ ಕನ್ನಡ ಜಿಲ್ಲೆಯ ಈ ಕೆಲಸವನ್ನೇ ಏಕೆ ಕೈಬಿಟ್ಟಿದ್ದೀರಿ ?

ಶ್ರೀ ಎಂ. ಎಂ. ಜೆ ಸದ್ಯೋಜಾತ.—ಆದನ್ನು ಕೈಬಿಟ್ಟಿದ್ದು ಈಗ ಮತ್ತೆ ತೆಗೆದುಕೊಳ್ಳಲಾಗಿದೆ. ೪.೭೧ ಲಕ್ಷಕ್ಕೆ ಎಸ್ಟಿಮೇಟ್ ಆಗಿದ್ದು ಹಣಕಾಸಿನ ಪರಿಸ್ಥಿತಿ ಸುಧಾರಿಸಿದ ತಕ್ಷಣ ತೆಗೆದುಕೊಳ್ಳಲಾಗುವುದು.

ಶ್ರೀ ದಾವೋದರ ಮುಲ್ಕಿ.—ಈ ಪ್ರಶ್ನೆಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲದಿರುವುದರಿಂದ ಮಾನ್ಯ ಮಂತ್ರಿಗಳಿಗೆ ಈ ಬಗ್ಗೆ ಗೊತ್ತಿಲ್ಲವೆಂದು ಕಾಣುತ್ತದೆ. ಆದ್ದರಿಂದ ಈ ಪ್ರಶ್ನೆಗೆ ಸಂಬಂಧಪಟ್ಟ ಮಂತ್ರಿಗಳು ಬರುವವರೆಗೆ ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ೪.೭೧ ಲಕ್ಷಕ್ಕೆ ಪುನರ್‌ಪರಿಶೀಲನೆಯಾಗಿದೆಯೆಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ದಾವೋದರ ಮುಲ್ಕಿ.—ಇಲ್ಲಿ ಪುನರ್‌ಪರಿಶೀಲನೆ ಮಾಡಿದ್ದೇವೆಂದು ಹೇಳುತ್ತಾರೆ. ಹೋದ ಸಲವೇ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಬಗ್ಗೆ ಕಾಗದ ಕಳುಹಿಸಿದ್ದೇವೆ. ಆದರೂ ಇದನ್ನು ಸೇರಿಸಿಲ್ಲ. ಈಗ ತೆಗೆದುಕೊಂಡಿದ್ದೇವೆಂದು ಹೇಳುತ್ತಿದ್ದಾರೆ. ಇದನ್ನು ಎಷ್ಟೆ ವರ್ಷಗಳಲ್ಲಿ ಮುಗಿಸುತ್ತೀರಾ ? ಯಾವಾಗ ತೆಗೆದುಕೊಳ್ಳುತ್ತೀರಾ ?

SRI M.M.J SADYOJATHA.—This work would be taken updepending on the availability of funds.

ಶ್ರೀ ದಾವೋದರ ಮುಲ್ಕಿ.—ಇನ್ನು ೧೦;೨೦;೩೦ ವರ್ಷಗಳು ಬೇಕಾಗುತ್ತದೆಯೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅಷ್ಟು ಬೇಕಾಗಿಲ್ಲ. ಒಂದೂ ವರ್ಷದೊಳಗೆ ತೆಗೆದು ಕೊಳ್ಳುತ್ತೇವೆ.

ಶ್ರೀ ಕೆ. ರಾಮು ಭಟ್.—ಈ ಕೆಲಸಗಳನ್ನು ಮಂತ್ರಿಗಳ ಕ್ಷೇತ್ರದಲ್ಲಿ ಮಾತ್ರ, ಮಾಡಿ ಬೇರೆ ಕಡೆಗಳಲ್ಲಿ ಬಿಟ್ಟಿರುವುದು ನಿಜವೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅದು ನಿಜ ಅಲ್ಲ.

Relief measures to the farmers

797 SRI S. R. BOMMAI (Hubli Rural).—Will the Chief Minister be pleased to state.—

(a) the Financial benefit involved in the reliefs aunounced by the Chief Minister to the farmers of the State after this Government assuming office on 12th January 1980 uptill now ;

(b) the amount involved in each of the benefits of reliefs given to the farmers ;

(c) the total enhanced amount accrued to the Government from the farmers by the increase of the water rate by an order dated 27th December 1980 ?

SRI R. GUNDU RAO (Chief Minister).-

(a) The datails of the financial benefits from these reliefs are as per *Appendix-I*. Enclosed.

(b) The details of the amount involved in each benefit is also indicated in *Appendix-I*. Enclosed.

(c) No amount accrued to Government in respect of water rates asper Government Order No. RD 192 EWR 80 dated 27th December 1980 because Government issued another order on 20th January 1981 revising the water rates for different crops. Previously the farmers were paying both betterment levy and water rate. Now betterment levy stands abolished and water rates have been revised. The per acre benefit for the farmer for different crops is indi cated in *Appendix-II*. Enclosed.